

**ಸಂದೀಪ್ ಈಶಾನ್ಯ**
ಕಲೆ: ರೂಪಶ್ರೀ ಕಲ್ಲಿಗನೂರು

# ಅಪರಾತ್ರಿಯಲ್ಲಿ ಸಾವನ್ನಪ್ಪಿದ ಕವಿಗೆ ಒಂದು ಮಾತು

ಬರೆದ ಕವಿತೆಗಳನ್ನು ನೀನು ಸಾಯುವ ಹಿಂದಿನ ರಾತ್ರಿ ಸುಟ್ಟು ಹಾಕಿದ್ದರೂ ಸಾಕಿತ್ತು
ನಿನ್ನ ಕುರಿತು ಈ ನೆಲದಲ್ಲಿ ತಕರಾರುಗಳೇ ಇರುತ್ತಿರಲಿಲ್ಲ
ಅಪರಾತ್ರಿಯಲ್ಲಿ ಥೇಟು ನಿನ್ನದೇ ಕವಿತೆಯ
ನಾಯಕನೊಬ್ಬ ಊರು ತೊರೆದ ಹೊರಟ ನಂತರ ಉಳಿಯುವ ಖಾಲಿ ಮೌನ
ನಿನ್ನ ನಿರ್ಗಮನದ ನಂತರ ಇದೇ ನೆಲದಲ್ಲಿ ಉಳಿಯಬಹುದಿತ್ತು
ನಿನ್ನ ಕವಿತೆಗಳನ್ನು ಬಿಡುಗಡೆಗೂ ಮುನ್ನವೇ ಸುಡಲು ಗುದ್ದಾಡಿದವರು ಗುಪ್ತವಾಗಿಯಾದರೂ
ಓದಿ ಸುಖಿಸುತ್ತಿದ್ದರು
ಈಗ ಆ ಎಲ್ಲಾ ಅವಕಾಶಗಳನೂ ನೀನೇ ಕಳೆದುಹೋಗಿರುವೆ ನೋಡು

ಬೆಟ್ಟಗಳನ್ನು ಸೀಳಿ ಉದಯವಾಗಿದ್ದ ಊರುಗಳಲ್ಲಿ
ತೆಳ್ಳಗಿನ ದಿನಗಳನ್ನು ಅನುಭವಿಸಿದ್ದ ನೀನು
ಮಹಾನಗರಗಳ ಪಬ್ಬುಗಳಲ್ಲಿ ಕೂತು
ಅರಳುವ ಕಾಡಿನ ಹೂಗಳು
ಅವ್ವನ ಸೀರೆಯ ನೆರಿಗೆಯ ಸೌಂದರ್ಯ
ಹಳೆಯ ಸವೆದ ಚಪ್ಪಲಿಯ ಬಿಸುಪು
ನಿಮ್ಮ ಮನೆಯ ಜೀತದಾಳಿನ ಮಗಳಿನ ಮೇಲೆ
ಉಂಟಾಗಿದ್ದ ಮೊದಲ ಪ್ರೀತಿಯ ಕುರಿತು ಬರೆಯಬಾರದಿತ್ತು
ಇಲ್ಲಿ ಜನರಿಗೆ ಬಡವನೆಂದರೆ ಮೊದಲಿನಿಂದಲೂ ಅಷ್ಟಕ್ಕಷ್ಟೇ



